"SATYAVADI" Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 20] ಶನಿವಾರ 6—10—45 [ಬಿಡಿ ಪ್ರತಿ 3 ಪೈ

ಭಾರತದಲ್ಲಿ

ಭಂಗಾರದ ವ್ಯಾಪಾರ

ಇಲ್ಲಿಂದ ಪರದೇಶಕ್ಕೆ ಹೋಗುವ ಸಾಮಗ್ರಿಗಳ ಬದಲು ನಮಗೆ ಭಂಗಾರ ದೊರೆಯಬೇಕು. ಹೀಗೆ ಭಾರತೀಯರ ವಿನಂತಿಯಿತ್ತು. ಕಳೆದ 1943 ನೇ ಆಗಸ್ಟ್ 17 ರಿಂದ ರಿಜರ್ವ್ ಬ್ಯಾಂಕು ಆಗಿಂದಾಗ್ಯೆ ಭಂಗಾರ ಮಾಡುತ್ತಾ ಒಂದಿದೆ. ಇ[redacted]ಡು ಮತ್ತು ಅಮೇರಿಕಾ ಕಡೆಯಿಂದ, ಭಾರತದಲ್ಲಿ ಅವರ ಬಗ್ಗೆ ನಡೆಯುವ ವ್ಯಾಪಾರಕ್ಕೆ ಪ್ರತಿಫಲವಾಗಿ ಭಂಗಾರ ದೊರೆಯುತ್ತದೆ ಭಾರತೀಯ ಸರ್ಕಾರಕ್ಕೆ ದಕ್ಷಿಣ ಆಫ್ರಿಕಾದಿಂದ ಕಮ್ಮಿ ದರದಲ್ಲಿ ಭಂಗಾರ ಪುರುವಟಿಯಾಗುವ ಕಾರಣ ಇದೆ. ಎನ್ನುವಾಗ ಅಲ್ಲಿಂದ ಕಮ್ಮಿ ಬೆಲೆಗೆ ಭಂಗಾರ ತರಿಸಿ ಇಲ್ಲಿ ಅಧಿಕ ಬೆಲೆಗೆ ಅದನ್ನು ಮಾರುತ್ತಾರೆ ಅಲ್ಲಿ 4 ಪೌಂಡಿಗೆ 1 ಔನ್ಸ್ ಭಂಗಾರ ದೊರೆಯುವುದಾದರೆ ಇಲ್ಲಿ ಅದನ್ನು ಔನ್ಸಿಗೆ 16 ಪೌಂಡಿನ ವರೆಗೆ ಮಾರುತ್ತಾರೆ. ಇಂಗ್ಲೆಂಡಿನ ಬ್ಯಾಂಕುಗಳಲ್ಲಿ ಔನ್ಸಿಗೆ 171 ಶಿಲಿಂಗ್ ಪ್ರಕಾರ ಭಂಗಾರ ಕೊಂಡುಕೊಂಡು ಅಮೇರಿಕಾಕ್ಕೆ ಔನ್ಸಿಗೆ 174 ಶಿಲಿಂಗ್ ಪ್ರಕಾರ ಮಾರುತ್ತವೆ. ಅದೇ ಬ್ಯಾಂಕುಗಳು ದಕ್ಷಿಣ ಆಫ್ರಿಕದ ಭಂಗಾರವನ್ನು 71 ಶಿಲಿಂಗ್ ದರದಲ್ಲಿ ಕೊಂಡುಕೊಂಡು ಭಾರತಕ್ಕೆ 320 ಶಿಲಿಂಗ್ ಬೆಲೆಗೆ ಮಾರುತ್ತವೆ. ಈ ವ್ಯಾಪಾರಕ್ಕೆ ಯಾವ ಹೆಸರಿಂದ ಕರೆಯಬೇಕೆಂಬುದೇ ಹೊಳೆಯುವುದಿಲ್ಲ. ನಮಗೆ ದಕ್ಷಿಣ ಆಫ್ರಿಕದಿಂದ ಭಂಗಾರ ಕೊಂಡುಕೊಳ್ಳಲು ನಿರ್ಬಂಧವಿದೆ. ಅಮೇರಿಕಾ ನಮ್ಮ ಭಂಗಾರದ ಬೆಲೆಯನ್ನು ರೂ. 30—35 ರ ದರಕ್ಕೆ ಇಳಿಸಿದಾಗ ಕೊಂಡುಕೊಂಡ ಭಂಗಾರವನ್ನೇ ಇದೀಗ ನಮಗೆ ರೂ. 70-80 ರ ದರೆದಲ್ಲಿ ಮಾರುವರು. ಹೀಗೆ ನಮ್ಮ ಹಣದಿಂದಲೇ ನಮ್ಮ ಸಾಮಗ್ರಿಗಳನ್ನು ಕೊಳ್ಳುತ್ತಾರೆ. ಇಲ್ಲಿಯ ವ್ಯಾಪಾರ ನಮ್ಮ ಲಾಭಕ್ಕಾಗುವುದಿಲ್ಲ. (ಪ್ರ)

ಕಮಲಾ ನೆಹರು ನಿಧಿ

ಮುಂಬಯಿಯ ಒಂದು ಸಿನಿಮಾ ಭವನದಲ್ಲಿ ಈಚೆಗೆ ವಾರ ಒಂದು ಹರಾಜು ನಡೆಯಿತು. ಒಂದು ಗಾಂಧೀಜೀಯವರ ಚಿತ್ರ, ಮತ್ತೊಂದು ಪಂ|| ನೆಹರೂರವರ ಚಿತ್ರ. ಹೀಗೆ ಎರಡು ಚಿತ್ರಗಳನ್ನು ಶ್ರೀಮತಿ ಸರೋಜಿನಿ ನಾಯ್ಡು ಹರಾಜು ಹಾಕಲಾಗಿ, ರೂ. ಎರಡು ಸಾವಿರ ಬಂದಿತು. ಇದು ಕಮಲಾನೆಹರು ನಿಧಿಗಾಗಿ ಕೊಡಲಾಯಿತು

ಜಪಾನ್ ಮಂತ್ರಿ ಮಂಡಲದ ರಾಜೀನಾಮೆ !

ಟೋಕಿಯೋ, ಅ 5 — ಹೋಂ ಮೆಂಬರು ಇವಾಯಾಮುಸಾಪಯನ್ನು ಡಿಸ್‌ಮಿಸ್ ಮಾಡಿರೆಂದು ಜ || ಮೆಕಾರ್ಥರರು ಮಂತ್ರಿ ಮಂಡಲಕ್ಕೆ ಕೊಟ್ಟ ಆಜ್ಞೆಯ ಪರಿಣಾಮವಾಗಿ, ಮುಖ್ಯ ಮಂತ್ರಿ ಮತ್ತಿತರರೂ ಕೊಟ್ಟ ರಾಜೀನಾಮೆಯನ್ನು ಚಕ್ರವರ್ತಿಗಳು ಅಂಗೀಕರಿಸಿದರು. ಹೊಸ ಮಂತ್ರಿ ಮಂಡಲ ಮೆಕಾರ್ಥರರ ಸಲಹೆ ಮೇರೆಲೆ ಚಕ್ರವರ್ತಿಗಳು ಮಾಡಲಿರುವರು.

ಬೊಂಬಾಯಿ, ಅ 4 — ಅನೇಕ ಮಿಲಿಯ ಗಜ ಹತ್ತಿ ಮತ್ತು ತುಪ್ಪಟದ ಬಟ್ಟೆಗಳು ಕ್ಷೀಪ್ರದಲ್ಲೇ ಸಂಯುಕ್ತ ರಾಷ್ಟ್ರಗಳಿಂದ ಭಾರತಕ್ಕೆ ಬರುವುದಾಗಿ ತಿಳಿಯಬಂದಿದೆ.

ನೋರಿಂಗ್‌ನ ವಿಚಾರಣೆಯು ನೂರೆಂಬರ್ಗ್‌ನಲ್ಲಿ ನಡೆಯುವುದು.

ಪ್ಯಾಲಿಸ್ಟೈನಿನಲ್ಲಿ ಅರಬ್—ಯಹೂದ್ಯ ಸಮಸ್ಯೆ ತೀವ್ರ ವಿಷಮ ಸ್ಥಿತಿಗೆ ಬರುತ್ತಿರುವುದೆಂದೂ ಜಾಫಸಲೆಂನಲ್ಲಿ ಬ್ರಿಟಿಷ್ ಪೋಲಿಸರು ಶೋಧನೆ ನಡೆಸುತ್ತಿದ್ದಾರೆ ಬೀದಿಗಳೆಲ್ಲೆಲ್ಲಾ ಆರ್ಮರ್ಡ್ ಕಾರುಗಳ ಓಡಾಟವಾಗಿದೆ. ಇನ್ನು ಯಹೂದ್ಯರು ಎಲ್ಲಗೆ ಬರಬಾರದೆಂದು ಅರಬ್ಬಿ ಮುಖಂಡರು ಹೇಳಿಕೆ.

ಬರ್ಮಾದ ಮೌಲ್ಮಿನ್‌ನಲ್ಲಿನ ಜಪಾನರು ಶರಣಾಗತರಾದರು. ಬರ್ಮಾ ಸಂಪೂರ್ಣವಾಗಿ ಮಿತ್ರರ ವಶವಾಯಿತು.

ಜಮಿರಾ ಚಿತ್ರದ ಒಂದು ದೃಶ್ಯ

ವಾರ್ತಾತರಂಗ

ಜಪಾನಿನ ರಾಜಕೀಯ ಬಂದಿಗಳನ್ನು ಬಿಡಿಸಿರುವುದು ತುಂಬಾ ಬಿಡಿಸಲ್ಪಟ್ಟಿದೆ.

ಟೋಕಿಯೋದಲ್ಲಿ ಸ್ಥಾಪಿತವಾಗಿರುವ ಮಿಲಿಟರಿ ಕೋರ್ಟಿನವರು ವಾರಂಟು ಅಮೇರಿಕ ಸಿಪಾಯಿಗಳು ತುಂಬಾ ಕೂಡಿದು ಒಂದು ಹೋಟಲು ಪ್ರೊಪ್ರೈಟರ್ ಮತ್ತು ಅತನ ಪತ್ನಿಯನ್ನು ಕೊಂದುದಕ್ಕಾಗಿ 10 ವರ್ಷ ಕಠಿಣ ಶಿಕ್ಷೆ ವಿಧಿಸಿರುವರು.

ಬಿಹಾರ್, ಸಿಂಧ್, ಪಂಜಾಬ್, ವಾಯವ್ಯ ಗಡಿ ಪ್ರಾಂತ್ಯ ಮತ್ತು ಒರಿಸ್ಸಾ ಈ ಐದು ಪ್ರಾಂತ್ಯಗಳಿಗೆ ಹೊಸದಾಗಿ ಗೌರ್ನರುಗಳ ನೇಮಕವಾಗಿದೆ. ಒರಿಸ್ಸಾಕ್ಕೆ ಸರ್ ಚಂದೂಲಾಲ್ ತ್ರಿವೇದಿಯವರು ನೇಮಿಸಲ್ಪಟ್ಟಿದ್ದಾರೆ. ಲಾರ್ಡ್ ಸಿಂಹರ ನಂತರ, ಭಾರತೀಯರಿಗೆ ಈ ಪದವಿ ದೊರೆತಿರುವುದು ಇದೇ ಮೊದಲು.

ಜಪಾನಿನ ಎರಡು ಮುಖ್ಯ ನಗರಗಳಿಂದ ಪೂರ್ವದಲ್ಲಿ ಡಚ್ಚರ ಮುಖ್ಯ ನೌಕಾ ನಿಲ್ದಾಣ ಸುರಬಾಯಿ ಮತ್ತು ಬಟೇವಿಯಾಕ್ಕೆ ಎಪ್ಪತ್ತು ಮೈಲಿ ದೂರದಲ್ಲಿರುವ ತತ್ಕಾಲಿಕ ರಾಜಧಾನಿ ಬಾಂಡುಗವನ್ನು ರಾಷ್ಟ್ರೀಯರು ಹಿಡಿದಿರುವರು. ಆರೂವರೆ ಸಾವಿರ ಡಚ್ಚರು ಬ್ರಿಟನ್ನಿನಿಂದ ಅಲ್ಲಿಗೆ ಹೋಗುವರು.

ಪ್ಯಾರಿಸ್, ಅ 4 — ಮಾಜಿ ಮುಖ್ಯ ಮಂತ್ರಿ ಲಾವಲ್ಲರಿಗೂ ಜಡ್ಜಿಯೊಬ್ಬರಿಗೂ ವಿಸಿವಿಸಿ ಮಾತಾಗಿ ಈ ರೀತಿಯಿದ್ದರೆ ತಾನು ವ್ಯವಹಾರ ನಡೆಸಲು ಸಾಧ್ಯವಿಲ್ಲವೆಂದರು ಜಡ್ಜರು. ಲಾವಲರ ಲಾಯರುಗಳು ತಾನು ಮೋಕದ್ದಮೆ ನಡೆಸಲು ಸಾಧ್ಯವಿಲ್ಲವೆಂದರು ಲಾವಲರ ಲಾಯರುಗಳು ತಾವು ಮೋಕದ್ದಮೆ ನಡೆಸುವುದಿಲ್ಲವೆಂದರು ಲಾವಲರು ತಾನೇ ಮೋಕದ್ದಮೆ ನಡೆಸುವುದಾಗಿ ತಿಳಿಸಿದರು. ಅವರನ್ನು ಕೋರ್ಟಿನಿಂದ ಕರೆದೊಯ್ಯಲಾಯಿತು.

ವಿಮುಕ್ತರಾದ ಬಂದಿಗಳನ್ನು ಮುಖ್ಯ ಸೇನಾನಿ ಕಂಡು ಮಾತಾಡಿಸಿದರು

ಡೆಹ್ರಾಡೂನ್, ಸೆ 29 — ಇಂಡಿಯನ್ ನ್ಯಾಷನಲ್ ಆರ್ಮಿಗೆ ಬಲತ್ಕಾರ ಪಡಿಸಿ ಸೇರಿಸಲು ಜಪಾನಿಗಳು ತಮಗೆ ಸಿಕ್ಕಿದ ಯುದ್ಧ ಖೈದಿಗಳನ್ನು ಬಹಳವಾಗಿ ಹಿಂಸಿಸಿದರೆಂದು ಮೂರು ವರ್ಷ ಶತ್ರುಬಂಧನದಲ್ಲಿ ನರಳಿ ಈಗತಾನೆ ಸಿಂಗಪುರದಿಂದ ಡೆಹ್ರಾಡೂನ್‌ಗೆ ಬಂದಿರುವ 2 ನೇ ಮತ್ತು 9 ನೇ ಘೂರ್ಕರ ತುಪಾಕಿ ದಳದವರು ಸರ್ ಕ್ಲಾಡ ಆಕಿನಲೇಕರಿಗೆ ಹೇಳಿದರು. ಮುಖ್ಯ ಸೇನಾನಿ ಅವೆಲ್ಲರೊಡನೆ ರೈಲು ರಸ್ತೆಯಲ್ಲಿ ಕೂಲಿಮಾಡಿ ಕಷ್ಟವನ್ನನುಭವಿಸಿ ಬಂದ ಅಧಿಕಾರಿಗಳನ್ನೂ ಮಾತಾಡಿಸಿದರು.

ಬರ್ಮಾದಲ್ಲಿ ಜಪಾನೀ ದಳಗಳ ಶರಣಾಗತಿ

ಆಲ್ಫ್‌ಸೀ ಸೆ 29— ಬರ್ಮಾದಲ್ಲಿ ಭಾರತೀ ಸೈನ್ಯಗಳಿಗೆ ಜಪಾನೀ ದಳಗಳು ಶರಣಾಗುತ್ತಿವೆ. ಸುಮಾರು ಮುಂದಿನ ವಾರ 53 ನೇ ಮತ್ತು 18 ನೇ ಶತ್ರುದಳಗಳು ಮಿತ್ರರ ವಶವಾಗಬಹುದು.

12 ನೇ ಭಾರತ ದಳಗಳು ಸಿತ್ತಾಂಗ್ ನದಿಯ ಸೇತುವೆಯ ಹತ್ತಿರ ಶತ್ರುಗಳ ಶರಣಾಗತಿಯನ್ನು ಸ್ವೀಕರಿಸಿದವು ಆಗ ಮಿತ್ರ ಸೇನೆಗಳು ಶಾಂತವಾಗಿದ್ದು ಶತ್ರುದಳಗಳನ್ನು ಕಂಡರು. ಯುದ್ಧ ಕೈದಿಗಳ ಪಲ್ಲಟೀಕಾದ ಮರ್ಯಾದೆಗೇನೂ ಕಡಿಮೆಯಾಗಿರಲಿಲ್ಲ. (ಐ ಪಿ.)

AT Opera— ZAMIN

ದುರ್ಗಾ ಮೋಟಿ, ಕುರ್ಷಿದ್, ನಾಜಿರ್ ಡೇವಿಡ್ ಪಾತ್ರವಹಿಸಿರುವ

ಜಮಾನ್

ಮುಂದಿನವಿನೋದ —

ರಂಜನ್, ಟಿ ಆರ್, ರಾಜಕುಮಾರಿ ಕೆ. ಎಲ್. ವಿ. ವಸುತ, ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

(ತಮಿಳು)



ಐ. ಜೆ. ಹಾಲ್

ರವೇ ಬೀದಿ — ಮೈಸೂರು

ಸತ್ಯವಾದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ವಿಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಸರಪಳಿಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

At Ranjit Humayun

4 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್ ವೀಣಾ, ನರ್ಗಿಸ್,, ಷಾ ನವಾಜ್

ಪಾತ್ರವಹಿಸಿರುವರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯುವಡಿಸುವುದೇನೆಂದರೆ : — ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಬಂಗ್ಲಾ ಸೈಟುಗಳನ್ನು ತಾರೀಖು 12-9-1945 ನೇ ಹರಾಜು ಇಸ್ತಿಹಾರ್ ನಾಮೆಯ ಷರತ್ತು ಪ್ರಕಾರ ತಾರೀಖು 20-10-1945 ರಿಂದ 23-10-1945 ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಚಾಂಭೋರೆ
ಛೇರ್ಮನ್